# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/115/2015-16 ದಿನಾಂಕ :11-08-2016.

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| 1.ಬಾತಿ ಮಲ್ಲಮ್ಮ ಗಂಡ ಬಾತಿ ಮಲ್ಲೇಶಪ್ಪ<br>2.ಬಾತಿ ಗೌರಮ್ಮ ಗಂಡ ಬಾತಿ ಮಲ್ಲಿಕಾರ್ಜುನ<br>3.ಬಾತಿ ರಾಧ ಗಂಡ ಬಾತಿ ಚಿಕ್ಕಪ್ಪ<br>4.ಬಾತಿ ನೀಲಕಂಠಪ್ಪ ತಂದೆ ಲೇಟ್ ಬಾತಿ ಮಲ್ಲಪ್ಪ<br>5.ಬಾತಿ ಮಲ್ಲೇಶಪ್ಪ ತಂದೆ ಬಾತಿ ನಿಂಗಪ್ಪ<br>6.ಬಾತಿ ಮಲ್ಲಿಕಾರ್ಜುನ ತಂದೆ ಬಾತಿ ನಿಂಗಪ್ಪ<br>7.ಬಾತಿ ಚಿಕ್ಕಪ್ಪ ತಂದೆ ಬಾತಿ ನಿಂಗಪ್ಪ<br>ಗ್ರಾಮ:-ಅಲಬೂರು ತಾ:-ಹ.ಬೊ.ಹಳ್ಳಿ | ಗಂಗಮಾಳಮ್ಮ ತಂದೆ ನೀಲಪ್ಪ<br>ಗ್ರಾಮ:-ವರದಾಪುರ ತಾ:-ಹ.ಬೊ.ಹಳ್ಳಿ |

**ವಿವಾದಿತಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಅಲಬೂರು | 242/ಬಿ | 6–34 | ಖುಷ್ಕಿ |
| 2. | ” | ” | 398/ಇ | 3–04 | ” |
| 3. | ” | ” | 429/ಬಿ | 4–15 | ” |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಅಲಬೂರು ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಅಲಬೂರು ಗ್ರಾಮದ ನಿವಾಸಿಯಾದ 1.ಬಾತಿ ಮಲ್ಲಮ್ಮ ಗಂಡ ಬಾತಿ ಮಲ್ಲೇಶಪ್ಪ 2.ಬಾತಿ ಗೌರಮ್ಮ ಗಂಡ ಬಾತಿ ಮಲ್ಲಿಕಾರ್ಜುನ 3.ಬಾತಿ ರಾಧ ಗಂಡ ಬಾತಿ ಚಿಕ್ಕಪ್ಪ 4.ಬಾತಿ ನೀಲಕಂಠಪ್ಪ ತಂದೆ ಲೇಟ್ ಬಾತಿ ಮಲ್ಲಪ್ಪ 5.ಬಾತಿ ಮಲ್ಲೇಶಪ್ಪ ತಂದೆ ಬಾತಿ ನಿಂಗಪ್ಪ 6.ಬಾತಿ ಮಲ್ಲಿಕಾರ್ಜುನ ತಂದೆ ಬಾತಿ ನಿಂಗಪ್ಪ 7.ಬಾತಿ ಚಿಕ್ಕಪ್ಪ ತಂದೆ ಬಾತಿ ನಿಂಗಪ್ಪ ಇವರು ಪಾಲು ವಿಭಾಗ ಪ್ರಕಾರ ಹಕ್ಕು ಬದಲಾವಣೆಯನ್ನು ಮಾಡಲು ದಿನಾಂಕ:20.04.2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21ರ ನೋಟೀಸನ್ನು ದಿನಾಂಕ:22.04.2016 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:18.05.2016 ರಂದು ಗಂಗಮಾಳಮ್ಮ ತಂದೆ ನೀಲಪ್ಪ ಇವರು ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.118/15-16ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ರವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:09.06.2016ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:09.06.2016 ರಿಂದ 27.07.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯರು ಹಾಜರಾಗಿರುತ್ತಾರೆ.

ತಕರಾರುದಾರರು ಹೇಳುವಂತೆ; ಸದರಿ ಜಮೀನಿಗೆ ನಾನು ತಕರಾರು ಅರ್ಜಿಯನ್ನು ಹಾಕಿರುವುದಿಲ್ಲ. ಹಾಗೂ ಸದರಿ ಜಮೀನಿಗೂ ನನಗೂ ಸಂಬಂಧ ಇರುವುದಿಲ್ಲ. ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಹಾಗೂ ಒಪ್ಪಿಗೆ ಪತ್ರವನ್ನು ಹಾಜರು ಪಡಿಸಿರುತ್ತಾರೆ.

ಪುಟ-2ಕ್ಕೆ

ಪ್ರಕರಣದಲ್ಲಿ ಉಭಯರು ನೀಡಿದ ಹೇಳಿಕೆ ಮತ್ತು ದಾಖಲೆಯನ್ನು ಪರಿಶೀಲಿಸಿ, ಅರ್ಜಿದಾರರ ಹೆಸರಿಗೆ ಪಾಲು ವಿಭಾಗ ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.118/2015-16ರ ಪ್ರಕರಣದಲ್ಲಿ ಈ ಕೆಳಗಿನಂತೆ ಪಾಲು ವಿಭಾಗ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

| *ಕ್ರಮ ಸಂಖ್ಯೆ* | *ತಾಲೂಕು* | *ಗ್ರಾಮ* | *ಸರ್ವೆ ನಂಬರ್* | ವಿಸ್ತೀರ್ಣ [ಎಕರೆಗಳಲ್ಲಿ] | *ಹಕ್ಕು ಬದಲಾವಣೆ ಪಡೆದವರು* |
|---|---|---|---|---|---|
| 01. | ಹಗರಿಬೊಮ್ಮನಹಳ್ಳಿ | ಅಲಬೂರು | 242/ಬಿ | 3-00 | ಬಾತಿ ಮಲ್ಲಮ್ಮ ಗಂಡ ಬಾತಿ ಮಲ್ಲೇಶಪ್ಪ |
| | | | | 1-60 | ಬಾತಿ ಗೌರಮ್ಮ ಗಂಡ ಬಾತಿ ಮಲ್ಲಿಕಾರ್ಜುನ |
| | | | | 1-74 | ಬಾತಿ ರಾಧ ಗಂಡ ಬಾತಿ ಚಿಕ್ಕಪ್ಪ |
| 02. | ಹಗರಿಬೊಮ್ಮನಹಳ್ಳಿ | ಅಲಬೂರು | 398/ಇ | 1-52 | ಬಾತಿ ನೀಲಕಂಠಪ್ಪ ತಂದೆ ಲೇಟ್ ಬಾತಿ ಮಲ್ಲಪ್ಪ |
| | | | | 1-52 | ಬಾತಿ ಮಲ್ಲೇಶಪ್ಪ ತಂದೆ ಬಾತಿ ನಿಂಗಪ್ಪ |
| 03 | ಹಗರಿಬೊಮ್ಮನಹಳ್ಳಿ | ಅಲಬೂರು | 429/ಬಿ | 2-07 | ಬಾತಿ ಮಲ್ಲಿಕಾರ್ಜುನ ತಂದೆ ಬಾತಿ ನಿಂಗಪ್ಪ |
| | | | | 2-08 | ಬಾತಿ ಚಿಕ್ಕಪ್ಪ ತಂದೆ ಬಾತಿ ನಿಂಗಪ್ಪ |

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:11.08.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

11/8/16

[ವಿ.ಹೆಚ್.ಮಲ್ಲಿಕಾರ್ಜುನ]
**ಉಪ ತಹಶೀಲ್ದಾರರು,**
**ನಾಡ ಕಾರ್ಯಾಲಯ,ಕೋಗಳಿ**

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧಪ್ರತಿ ಕಡತಕ್ಕೆ.